ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

**ಸ್ಪೆಷಲ್ (Electricity) ಕೇಸ್: 18/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅನನ್ಯ ಕುಮಾರ್ ಜೆ | ಫ್ರಾಸಾ- 2 |
| ತಂದೆಯ ಹೆಸರು | : | ಡಾ.ಜಗದೀಶ್ ಕೊಪ್ಪ ಎನ್ | ಚಾಸಾ- 1 |
| ವಯಸ್ಸು | : | 34 ವರ್ಷ | |
| ವೃತ್ತಿ | : | ವಲಯ ಅರಣ್ಯಾಧಿಕಾರಿ, ಪುಷ್ಪಗಿರಿ | |
| ವಾಸ | : | ಸೋಮವಾರಪೇಟೆ | |

ಸಾಕ್ಷಿಯನ್ನು ದಿನಾಂಕ **12-03-2024** ರಂದು ಕರೆಯಿಸಿ ಪ್ರಮಾಣ ವಚನ **ಭೋಧಿಸಲಾಯಿತು.**

<u>**ಮುಖ್ಯವಿಚಾರಣೆ:** ಸರ್ಕಾರಿ ಅಭಿಯೋಜಕರಿಂದ</u>:

ನಾನು 2019 ರಿಂದ 2022 ರವರೆಗೆ ಕುಶಾಲನಗರ ವಲಯಯಲ್ಲಿ ವಲಯ ಅರಣ್ಯಾಧಿಕಾರಿ ಆಗಿ ಸೇವೆ ಸಲ್ಲಿಸಿರುತ್ತೇನೆ.

ದಿನಾಂಕ 29.07.2021 ರಂದು ಕುಶಾಲನಗರ ವಲಯದ ಅತ್ತೂರು ಶಾಖೆಯ ಅಂದಗೋವೆ ಗಸ್ತಿನ ವ್ಯಾಪ್ತಿಯಲ್ಲಿ ಬಸವನಹಳ್ಳಿ ಗ್ರಾಮದ ಹೊಸಕಾಡು ಎಂಬಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆ ಮೃತ ಪಟ್ಟಿರುವ ಬಗ್ಗೆ ಮಾಹಿತಿ ಬಂದಿತು, ಆ ಪ್ರಕಾರ ನಾನು ಮತ್ತು ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಅಲ್ಲಿ ಚಂದ್ರಪ್ಪ ಮತ್ತು ಗೌರಮ್ಮ ಎಂಬುವರ ಹೊಲಗಳ ಮಧ್ಯದಲ್ಲಿ ಸೋಲಾರ್ ತಂತಿ ಬೇಲಿ ಅಳವಡಿಸಿರುವುದು ಕಂಡುಬಂತು, ಸದರಿ ಸೋಲಾರ್ ತಂತಿಗೆ ಸೊಂಡಲು ತಾಗಿ ಆನೆ ಗೌರಮ್ಮ ಮತ್ತು ಲತಾ ಇವರ ಜಮೀನಲ್ಲಿ ಮೃತಪಟ್ಟಿರುವುದು ಕಂಡುಬಂತು. ಸದರಿ ಸೋಲಾರ್ ತಂತಿಯನ್ನ ಆರೋಪಿ ಅಳವಡಿಸಿದ್ದಾರೆ ಎಂದು ಮಾಹಿತಿ ಬಂತು ಅವರ ಮನೆಗೆ ಹೋಗಿ ಪರಿಶೀಲಿಸಿರುತ್ತೇನೆ. ಅವರು ಯಾವುದೇ ಸೋಲಾರ್ ಪ್ಯಾನಲ್ ಗಳನ್ನ ಅಳವಡಿಸದೆ ನೇರವಾಗಿ ಮನೆಯ ವಿದ್ಯುತ್ ಸಂಪರ್ಕದಿಂದ ಬ್ಯಾಟರಿಗೆ ಚಾರ್ಜ್ ಮಾಡಿ ಬ್ಯಾಟರಿಯಿಂದ ಒಂದು ಬಿಳಿ ಬಣ್ಣದ ತಂತಿಯಿಂದ ಸೋಲಾರ್ ತಂತಿಗೆ ಅಳವಡಿಸಿರುವುದು ಕಂಡುಬಂತು ಸದರಿ ಕೃತ್ಯ ವನ್ಯಜೀವಿ ಸಂರಕ್ಷಣಾ ಕಾಯ್ದೆ ಮತ್ತು ವಿದ್ಯುತ್ಚ್ಛಕ್ತಿ ಕಾಯ್ದೆಗೆ ವಿರುದ್ದವಾಗಿದ್ದರಿಂದ ಈ ಬಗ್ಗೆ

ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ದೂರನ್ನ ದಾಖಲಿಸಿರುತ್ತೇನೆ. ಸದರಿ ದೂರನ್ನ ನೋಡಿ ಗುರುತಿಸಿದ್ದು ಅದನ್ನು ನಿಪಿ-**6** ಎಂದು ಅದರಲ್ಲಿರುವ ನನ್ನ ಸಹಿ ನಿಪಿ-**6(ಎ)** ಎಂದು ಗುರುತಿಸಲಾಯಿತು. ಆನಂತರ ಪೊಲೀಸರು ನನಗೆ ನೋಟಿಸ್ ನೀಡಿ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ ಸದರಿ ನೋಟಿಸನ್ನ ನೋಡಿ ಗುರುತಿಸಿದ್ದು, ಅದನ್ನು ನಿಪಿ-**7** ಎಂದು ಗುರುತಿಸಲಾಯಿತು. ಪೊಲೀಸರು ಅದೇ ದಿನ ಸ್ಥಳಕ್ಕೆ ವಿದ್ಯುತ್‌ಚಕ್ತಿ ವಿಭಾಗದ ಅಧಿಕಾರಿಗಳನ್ನ ಹಾಗೂ ಪಂಚಾಯಿತಿ ಅಧಿಕಾರಿ, ಗ್ರಾಮಲೆಕ್ಕಾಧಿಕಾರಿ, ಇವರನ್ನ ಸ್ಥಳಕ್ಕೆ ಬರ ಮಾಡಿಕೊಂಡಿದ್ದರು. ಚಂದ್ರಪ್ಪ ರವರ ಮೆಯಿಂದ ಬ್ಯಾಟರಿ ಚಾರ್ಜರ್, ಬ್ಯಾಟರಿ, ಸೋಲರ್ energizer, ಒಂದು ಕಬ್ಬಿಣದ ತಂತಿ, ಒಂದು ಬಿಳಿ ಬಳಣ್ಣದ ಸರ್ವಿಸ್ ವೈರ್ ಇವುಗಳನ್ನ ಅಮಾನತುಪಡಿಸಿಕೊಂಡರು. ಆನಂತರ ನಾನು ಇಲಾಖ ಪಶು ವೈದ್ಯಾಧಿಕಾರಿಗೆ ಕರೆ ಮಾಡಿ ಅವರನ್ನ ಸ್ಥಳಕ್ಕೆ ಬರಮಾಡಿಕೆಂಡು ಮೃತ ಪಟ್ಟಿದ್ದ ಗಂಡಾನೆ ಮರಣೋತ್ತರ ಪರೀಕ್ಷೆ ನಡೆಸಿರುತ್ತಾರೆ. ಶವ ಪರೀಕ್ಷೆ ನಂತರ ಸದರಿ ಗಂಡಾನೆಯ ದಂತಗಳನ್ನ ಹೊರತೆಗೆದು ಅವುಗಳನ್ನ ಸುರಕ್ಷತೆಗಾಗಿ ಕುಶಾಲನಗರದ ಶ್ರೀಗಂದಕೋಟೆಗೆ ಸಾಗಿಸಿರುತ್ತೇವೆ. ಪಶುವೈದ್ಯಾಧಿಕಾರಿಗಳು ಆನೆಯ ಮರಣೊತ್ತರ ಪರೀಕ್ಷಾ ವರದಿಯನ್ನು ದಿನಾಂಕ 05.08.2021 ರಂದು ನೀಡಿರುತ್ತಾರೆ. ಅದನ್ನು ನಾನು ಪೊಲೀಸರಿಗೆ ರವಾನಿಸಿರುತ್ತೇನೆ. ಸದರಿ ಮರಣೋತ್ತರ ಪರೀಕ್ಷಾ ವರದಿಯನ್ನ ನೋಡಿ ಗುರುತಿಸಿದ್ದು, ಆನೆ ಶವಮಹಜರು ಕಾಲಕ್ಕೆ ನಾನು ಹಾಜರಿದ್ದು ರುಜು ಮಾಡಿದ್ದೇನೆ, ಶವಮಹಜರು ನಿಪಿ-2 ಇದ್ದು, ಅದರಲ್ಲಿರುವ ನನ್ನ ಸಹಿ ನಿಪಿ-**2(ಬಿ)** ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ನಿಪಿ-3 ರಂತೆ ಪೊಟೋಗಳನ್ನ ತೆಗೆದಿರುತ್ತಾರೆ. ಮರಣೋತ್ತರ ಪರೀಕ್ಷಾ ವರದಿಯನ್ನು ನಿಪಿ-**8** ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿಯ ಮನೆಯಲ್ಲಿ ಬರೆದ ಮಹಜರಿಗೆ ನಾನು ಸಹಿ ಮಾಡಿದ್ದು ಸದರಿ ಮಹಜರು ನಿಪಿ-4 ಇದ್ದು, ಅದರಲ್ಲಿರುವ ನನ್ನ ಸಹಿ ನಿಪಿ-**4(ಬಿ)** ಎಂದು ಗುರುತಿಸಲಾಯಿತು. ಆನೆ ದಂತಗಳನ್ನ ನಮ್ಮ ವಶಕ್ಕೆ ಪಡೆದಿದ್ದು ಆ ಬಗ್ಗೆ ಪತ್ರವನ್ನ ನಿಪಿ-**9** ಎಂದು ಗುರುತಿಸಲಾಯಿತು. ಆನೆಯ ಸೊಂಡಲಿಗೆ ಸುತ್ತಿಕೊಂಡಿದ್ದ ಸೋಲಾರ್ ತಂತಿಯನ್ನ ನ್ಯಾಯಾಲಯದ ಮುಂದೆ ಗುರುತಿಸಿದ್ದು ಅದನ್ನು ಮುಮಾ-**5** ಎಂದು ಗುರುತಿಸಲಾಯಿತು. ನಿಪಿ-4 ರಡಿ ಮುಮಾ-1 ರಿಂದ ಮುಮಾ-4 ನ್ನು ಸಹ ಪೊಲೀಸರು ಅಮಾನತುಪಡಿಸಿಕೊಂಡಿರುತ್ತಾರೆ.

<u>ಪಾಟೀಸವಾಲು- ಆರೋಪಿ ಪರವಾಗಿ ಶ್ರೀ ಆರ್.ಎಲ್ ವಕೀಲರಿಂದ:</u>

ಪಿರ್ಯಾದನ್ನ ನಾನು ಕಛೇರಿಯಲ್ಲಿ ತಯಾರು ಮಾಡಿಸಿ ಕೊಟ್ಟಿರುತ್ತೇನೆ. ಠಾಣೆಗೆ ಹೋದಾಗ ಬೆಳಿಗ್ಗೆ 10-30 ಯಿಂದ 11 ಗಂಟೆ ಸಮಯ ಆಗಿತ್ತು. ಉಪ ವಲಯ ಅರಣ್ಯಾಧಿಕಾರಿಗಳು ನನಗೆ ಪೋನ್ ಮಾಡಿ ತಿಳಿಸಿದ ನಂತರ ನಾನು ಸ್ಥಳಕ್ಕೆ ಹೋಗಿ ಖಾತರಿ ಪಡಿಸಿಕೊಂಡು ಆನಂತರ ದೂರು ನೀಡಿರುತ್ತೇನೆ. ಚಂದ್ರಪ್ಪ ರವರ ಮನೆ ಸುತ್ತ ಸೋಲಾರ್ ತಂತಿ ಹಾಕಿದ್ದರಿಂದ ಜೊತೆಗೆ ಗ್ರಾಮ ಲೆಕ್ಕಿಗರು ಸಹ ಈ ಬಗ್ಗೆ ಹೇಳಿದ್ದರಿಂದ ನಾನು ಅವರ ಹೆಸರನ್ನ ಸೇರಿಸಿರುತ್ತೇನೆ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ನನಗೆ ಗ್ರಾಮಲೆಕ್ಕಿಗರು ಸಹ ಈ ಬಗ್ಗೆ ಮಾಹಿತಿ ನೀಡಿಲ್ಲ ಆದರೂ ಸಹ ಆರೋಪಿಯನ್ನ ಸಿಕ್ಕಿಸಲು ಸುಳ್ಳು ಪಿರ್ಯಾದು ನೀಡಿದ್ದೇನೆ ಎಂದರೆ ಸರಿಯಲ್ಲ. 12-30 ಗಂಟೆ ಸಮಯಕ್ಕೆ ಮಹಜರಿಗೆ ಹಾಜರಾಗಲು ನನಗೆ ನೀಡಿರುತ್ತಾರೆ. ನನ್ನ ಕಛೇರಿಗೆ ನೋಟಿಸನ್ನ ತಂದು ನೀಡಿರುತ್ತಾರೆ. ಅದಾದ ನಂತರ 1 ಗಂಟೆ ಒಳಗೆ ನಾವು ಸ್ಥಳಕ್ಕೆ ಹೋದೆವು. ಮಹಜರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ. ಮಹಜರಿನಲ್ಲಿ ಆನೆಯ ತಲೆ ದಕ್ಷಿಣ ದಿಕ್ಕಿಗೆ ಇದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಮಹಜರಲ್ಲಿ ಆನೆಯ ತಲೆ ದಕ್ಷಿಣ ದಿಕ್ಕಿಗೆ ಬಿದ್ದಿರುವ ಬಗ್ಗೆ ನಮೂದಾಗಿದೆ ಎಂದರೆ ಸರಿ. ನಕಾಶೆಯಲ್ಲಿ ಆನೆಯ ತಲೆ ಪಶ್ಚಿಮ ದಿಕ್ಕಿಗೆ ತೋರಿಸಿದೆ ಎಂದರೆ ಸರಿ, ಆದರೆ ಸೊಂಡಿಲು ದಕ್ಷಿಣ ದಿಕ್ಕಿಗೆ ಇದೆ. ಆನೆ ಬಿದ್ದಿದ್ದ ಸ್ಥಳದ ಚೆಕ್ಕು ಬಂದಿ ಹೇಳಲಾಗುವುದಿಲ್ಲ. ಮಹಜರಲ್ಲಿ ಸೋಲಾರ್ ತಂತಿ ಎಷ್ಟು ಉದ್ದ ಇದೆ ಎಂದು ನಮೂದು ಮಾಡಿರುವುದಿಲ್ಲ. ನಕಾಶೆಯಲ್ಲಿ ಆರೋಪಿಯ ಮನೆಯನ್ನ ತೋರಿಸಿಲ್ಲ ಎಂದರೆ ಸರಿ. ಆನೆ ಯಾವ ಭಾಗಕ್ಕೆ ಬಿದ್ದಿದೆ ಎಂದು ನಿಪಿ-4 ರಲ್ಲಿ ತೋರಿಸಿಲ್ಲ ಎಂದರೆ ಸರಿ. ಆನೆ ಸೊಂಡಿಲು ಸೋಲಾರ್ ತಂತಿಯನ್ನ ಹಿಡಿದುಕೊಂಡಿತ್ತು. ಆನೆ ಬಿದ್ದಿದ್ದ ಜಾಗಕ್ಕೂ ಆರೋಪಿ ಮನೆಗೂ 15 ರಿಂದ 20 ಅಡಿ ಅಂತರ ಇದೆ. ನಕಾಶೆಯಲ್ಲಿ ಆನೆ ಬಿದ್ದಿರುವ ಬಗ್ಗೆ ನಮೂದಾಗಿರುವುದಿಲ್ಲ ಎಂದರೆ ಸರಿ. ಮುಮಾ-1 ರಿಂದ ಮುಮಾ-4 ನ್ನು ಅಮಾನತುಪಡಿಸಿಕೊಂಡಾಗ ಅವುಗಳ ಮೇಲೆ ನನ್ನ ಸಹಿಯನ್ನೇನು ಪಡೆದುಕೊಂಡಿಲ್ಲ. ಸೋಲಾರ್ ತಂತಿಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಇದೇ ವೈರನ್ನ ಅಮಾನತುಪಡಿಸಿಕೊಳ್ಳಲಾಗಿದೆ ಎಂಬ ಬಗ್ಗೇ ವಿಶೇಷ ಗುರುತುಗಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ವೈಯರನ್ನ ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ-1 ರಿಂದ ಮುಮಾ-4 ನ್ನು ನಾವು ಆರೋಪಿಯಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುಮಾ-5 ನ್ನು ಸಹ ನಾವು ಸ್ಥಳದಿಂದ ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮತ್ತು ನಿಪಿ-4 ಕ್ಕೆ ಸಹಿ ಮಾಡುವಾಗ ನಡುವೆ ಅರ್ಧ ಗಂಟೆ ಅಂತರ

ಇರುತ್ತದೆ. ನಿಪಿ-4 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಮತ್ತು ನಿಪಿ-4 ರಲ್ಲಿ ಇರುವ ಸಂಗತಿಗಳು ನನಗೆ ಗೊತ್ತಿಲ್ಲ ಆದರೂ ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆನೆ ಸಾವಿಗೆ ಆರೋಪಿ ಕಾರಣ ಅಲ್ಲ ಎಂಬ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದೂರಿಗೆ ಪೂರಕವಾಗಿ ಕೇಸಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ.ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.